ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 357/2015

ಸಿ ಡಬ್ಲ್ಯೂ-3

ಪಿ ಡಬ್ಲ್ಯೂ-3

ದಿಃ 24-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಸಂದೇಶ ನಾಯ್ಕ

ತಂದೆಯ ಹೆಸರುಃ ಮಂಗೇಶ ನಾಯ್ಕ

ವಯಸ್ಸುಃ 34 ವರ್ಷ

ಉದ್ಯೋಗಃ ಕೂಲಿ

ವಿಳಾಸಃ ಕುಂಬಾರಕೇರಿ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಚಾಸಾ-2 ರವರ ಪರಿಚಯ ಇರುತ್ತದೆ. 2014 ರಲ್ಲಿ ಪಂಚನಾಮೆಯನ್ನು ನ್ಯಾಯಾಲಯದ ಆವರಣದಲ್ಲಿ ಬೆಳಿಗ್ಗೆ 11 ರಿಂದ 12 ಗಂಟೆಯ ಅವಧಿಯಲ್ಲಿ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-1 ಮತ್ತು 2 ರವರು ಇದ್ದೇವು. ಚಾಸಾ-1 ರವರಿಗೆ ಆರೋಪಿಯ ಅವಾಚ್ಯ ಶಬ್ದಗಳಿಂದ ಬೈದಿದ್ದರ ವಿಷಯವಾಗಿ ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿಯು ನಿಪಿ-2 ಘಟನಾ ಸ್ಥಳದ ಮೇಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ-2ಸಿ ಎಂದು ಗುರುತಿಸಲಾಯಿತು. ಮತ್ತೆ ಏನನ್ನೂ ಮಾಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ನೀವು ಹೇಳಿದ ಪಂಚನಾಮೆಯು ದಿಃ22-08-2014 ರಂದು ಮಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್. ಆರ್ ಎನ್ ಇವರಿಂದಃ

3. ನಿಮಗೂ ಹಾಗೂ ಚಾಸಾ-1 ರವರಿಗೂ ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿಯು ದೂರದ ಸಂಬಂಧಿ ಎಂದು ನುಡಿಯುತ್ತಾರೆ. ಯಾವ ರೀತಿಯ ಸಂಬಂಧ ಎಂದರೆ ಸಾಕ್ಷಿಯು ಹೇಳಲು ಬರುವುದಿಲ್ಲ, ನಮ್ಮ ತಂದೆಯ ದೂರದ ಸಂಬಂಧಿ ಎಂದು ನುಡಿಯುತ್ತಾರೆ. ಶ್ರೀಕಾಂತ ನಾಯ್ಕ ಇವರು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿಯು ನಮ್ಮ ತಂದೆಯವರ ಸಹೋದರಿಯ ಗಂಡ ಎಂದು ನುಡಿಯುತ್ತಾರೆ. ಚಾಸಾ-1 ಮತ್ತು ಶ್ರೀಕಾಂತ ನಾಯ್ಕ ಇವರು ಸಂಬಂದಿಕರು ಎಂದರೆ ಸರಿ. ಆದ ಕಾರಣ ನಿಮಗೂ ಹಾಗೂ ಚಾಸಾ-1 ರವರಿಗೂ ಆತ್ಮೀಯತೆ ಇರುತ್ತದೆ ಎಂದರೆ ಸರಿ. ನೀವು ಚಾಸಾ-1 ರವರ ಜೊತೆಗೆ ಅನೇಕ ವರ್ಷಗಳಿಂದ ಆತ್ಮೀಯತೆಯಿಂದ ಇದ್ದು, ಅವರನ್ನು ಬೆಂಬಲಿಸುತ್ತಾ ಬಂದಿರುತ್ತೀರಿ ಎಂದರೆ ಸರಿ. ಚಾಸಾ-1 ರವರು ತಮ್ಮ ಹುಟ್ಟು ಹಬ್ಬದ ಆಚರಣೆಯಾಗಲಿ ಹಾಗೂ ಬೇರೆ ಕಾರ್ಯಕ್ರಮಗಳಲ್ಲಿ ನಿಮ್ಮನ್ನೆಲ್ಲರನ್ನು ಕರೆದುಕೊಂಡು

ಹೋಗುತ್ತಾರೆ ಎಂದರೆ ಸರಿ. ಇಂತಹ ಸಂದರ್ಭದಲ್ಲಿ ಅವರು ಫೋನ್ ಮುಖಾಂತರ ನಿಮ್ಮನ್ನು ಸಂಪರ್ಕಿಸುತ್ತಾರೆ ಎಂದರೆ ಸರಿ.

4. ಆ ದಿನ ಚಾಸಾ-1 ರವರು ಎಷ್ಟು ಗಂಟೆಗೆ ಬರಲು ಹೇಳಿರುತ್ತಾರೆ ಎಂದರೆ ಸಾಕ್ಷಿಯು ನಾನು ತಹಶೀಲ್ದಾರ ಕಚೇಯಲ್ಲಿ ಇದ್ದಾಗ ಪಿ ಎಸ್ ಐ ಇವರು ಬೆಳಿಗ್ಗೆ 10 ಗಂಟೆಗೆ ಬರಲು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ತಹಶಿಲ್ದಾರ ಕಚೇರಿ ಮತ್ತು ಪೊಲೀಸ್ ಠಾಣೆ ಮಧ್ಯ ಪಾಗಾರ ಇರುತ್ತದೆ ಎಂದರೆ ಸರಿ. ನೀವು ಹಾರ್ಡಕರ ಇವರಿಗೆ ಹೇಗೆ ಪರಿಚಯ ಎಂದೆರ ಸಾಕ್ಷಿಯು ನಾನು ಚಾಸಾ-2 ರವರ ಜೊತೆಗೆ ಇದ್ದಾಗ ಪಂಚನಾಮೆಗೆ ಬರಲು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಿಮಗೆ ಹಾಗೂ ಚಾಸಾ-2 ರವರಿಗೆ ಯಾವ ವಿಷಯಕ್ಕಾಗಿ ಪಂಚನಾಮೆಗೆಂದು ಬರಲು ಹೇಳಿರುತ್ತಾರೆ ಮಂದರೆ ಸಾಕ್ಷಿಯು ಚಾಸಾ-1 ರವರ ಪ್ರಕರಣದ ವಿಚಾರವಾಗಿ ಬರಲು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಯಾಕೆ ಬರಬೇಕು, ನಾನು ಅವರ ಸಂಬಂಧಿಯಾರುತ್ತೇನೆ ಎಂದು ನೀವು ಹೇಳಿರುವುದಿಲ್ಲವಾ ಎಂದರೆ ಸಾಕ್ಷಿಯು ಆ ರೀತಿ ಹೇಳಲು ಯಾವುದೇ ತೊಂದರೆ ಇರಲಿಲ್ಲ, ಆದರೆ ಅವರು ಹೇಳಿದ ತಕ್ಷಣ ಚಾಸಾ-2 ರವರ ಜೊತೆಗೆ ಅವರ ಬೈಕಿನಲ್ಲಿ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-1 ರವರು ಎಷ್ಟು ಗಂಟೆಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಜೊತೆಗೆ ಇದ್ದರು ಎಂದು ನುಡಿಯುತ್ತಾರೆ. ನೀವು, ಚಾಸಾ-1,2 ಮತ್ತು ಹಾರ್ಡಕರ ಇವರು ಒಂದೇ ಬಾರಿ ಬಂದಿರುತ್ತೀರಿ ಎಂದರೆ ಸರಿ. ಹಾರ್ಡಕರ ಇವರು ಅಂಕೋಲಾ ಠಾಣೆಯಿಂದ ಪೊಲೀಸ್ ಜೀಪಿನಲ್ಲಿ ಒಟ್ಟಿಗೆ ಬಂದಿರುತ್ತೀರಾ ಎಂದರೆ

ಸಾಕ್ಷಿಯು ನಾನು ಮತ್ತು ಚಾಸಾ-2 ರವರು ಬೈಕಿನಲ್ಲಿ ಬಂದಿದ್ದು, ಚಾಸಾ-1 ರವರು ಹಾರ್ಡಕರ ಇವರು ಒಟ್ಟಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಇಲ್ಲಿ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-1 ರವರು ಪೊಲೀಸರಿಗೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ನೀವೇನೂ ಹೇಳಿ, ತೋರಿಸಿ ಬರೆಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವಕರೆದು ಚಾಸಾ-1 ರವರು ಹೇಳಿದಂತೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಚಾಸಾ-1 ರವರು ಹೇಳಿ, ಬರೆಸಿದ ನಂತರ ನಿಮಗೆ ಸಹಿ ಹಾಕು ಎಂದು ಹೇಳಿದ ಮೇರೆಗೆ ಹಾಕಿರುತ್ತೀರಿ ಎಂದರೆ ಸರಿ. ಚಾಸಾ-1 ರವರು ಹೇಳಿದಂತೆ ನಾವು ಸಹಿ ಹಾಕಿರುತ್ತೇವೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನೀವು ಯಾವ ದಿನದಂದು ಈ ಮೊದಲು ನ್ಯಾಯಾಲಯಕ್ಕೆ ಬಂದಿರುತೀರಿ ಎಂದರೆ ಸಾಕ್ಷಿಯು ಸಮನ್ಸ ಬಂದ ಕಾರಣ ಬಂದಿದ್ದು, ಯಾವ ದಿನಾಂಕ ಎಂದು ಗೊತ್ತಿರುವುದಿಲ್ಲ.

5. ಮತ್ತೆ ಯಾರ್ಯಾರು ಸಹಿ ಹಾಕಿರುತ್ತಾರೆ ಎಂದರೆ ಸಾಕ್ಷಿಯು ನಾನು ಮತ್ತು ಚಾಸಾ-2 ರವರು ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಮತ್ತು ಚಾಸಾ-1 ರವರು ಕುಟುಂಬದ ಸಂಬಂಧಿಕರು ಆಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಹಾಗೂ ಅವರಿಗೆ ಆರೋಪಿಯ ಮೇಲೆ ದ್ವೇಷ ಇದ್ದ ಕಾರಣ ಬೇರೆ ಯಾರೂ ಸಾಕ್ಷಿದಾರರು ಸುಳ್ಳು ಪ್ರಕರಣಕ್ಕೆ ಸಹಿ ಹಾಕಲು ಬರುವುದಿಲ್ಲ ಎಂಬ ಕಾರಣದಿಂದ ನಿಮ್ಮನ್ನು ಸೇರಿಕೊಂಡಿರುತ್ತಾರೆ ಎಂದರೆ

ಸರಿಯಲ್ಲ. ನೀವಾಗಲಿ ಅಥವಾ ಚಾಸಾ–2 ರವರಾಗಲಿ ನ್ಯಾಯಾಲಯಕ್ಕೆ ಪಂಚನಾಮೆಗೆಂದು ಬಂದಿದ್ದಾಗಲಿ ಅಥವಾ ಸಹಿ ಹಾಕಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರೂ ಹಾಗೂ ಪೊಲೀಸರು ಠಾಣೆಯಲ್ಲಿಯೇ ಕುಳಿತುಕೊಂಡು, ಸೃಷ್ಟಿ ಮಾಡಿದ ಪಂಚನಾಮೆಗೆ ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.